<u>ಸಿಸಿ ನಂ. 34/2023</u> <u>ಪಿಡಬ್ಲೂ :1</u>

<u>ದಿನಾಂಕಃ 27-08-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಮುಂದುವರೆದ ಮುಖ್ಯ ವಿಚಾರಣೆಃ ಆರೋಪಿಯ ಪರವಾಗಿಃ ಶ್ರೀ ಎಸ್ ಯು ಎ ವಕೀಲರಿಂದಃ</u>**

5. ಫಿರ್ಯಾದುದಾರರು ನೋಟಿಸನ್ನು ಕೊಟ್ಟ ನಂತರ ನಾನು ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಮಿಸ್ಸಿಂಗ್ ಕಂಪ್ಲೆಂಟ್ ಗೆ ಪೊಲಿಸರು ಕೊಟ್ಟಿರುವ ಸ್ವೀಕೃತಿ ಹಾಗೂ ನೋಟಿಸನ್ನು ಪೋಲಿಸ್ ಠಾಣೆಗೆ ಹೋಗಿ ನೀಡಿರುತ್ತೇನೆ ಹಾಗೂ ನನಗ ನ್ಯಾಯಾ ದೊರಕಿಸಿಕೊಡುವಂತೆ ಅವರನ್ನು ಕೇಳಿರುತ್ತೇನೆ ಆಗ ಅವರು ನನಗೆ ಫಿರ್ಯಾದುದಾರರ ವಿಳಾಸವನ್ನು ಕೇಳಿದರು . ನೋಟಿಸಿನಲ್ಲಿ ಫಿರ್ಯಾದುದಾರರ ವಿಳಾಸ ಇತ್ತು . ಅದನ್ನು ತೆಗೆದುಕೊಂಡು ಪಿಎಸ್ ಐ ರವರು ಇಬ್ಬರು ಪೋಲಿಸರನ್ನು ನಾಗರಾಜ ಪಾಂಡುರಂಗ ನಾಯ್ಕರವರ ಮನೆಗೆ ಕಳುಹಿಸಿದರು ಹಾಗೂ ಪ್ರಕರಣದ ಬಗ್ಗೆ ವಿಚಾರಣೆ ಮಾಡಿದರು . ಆಗ ನಾಗರಾಜ ಪಾಂಡುರಂಗ ನಾಯ್ಕ ರವರು ತಪ್ಪಾಯಿತು ನನಗೆ ನನ್ನ ಮಾವನ ನಾಗೇಶ ಶಿವಪ್ಪ ನಾಯ್ಕುರವರು ಕೊಟ್ಟಿದ್ದರು ಎಂದು ಹೇಳಿದರು. ತಪ್ಪಾಯಿತು ನಾನು ಚೆಕ್ , ಚೆಕ್ ಪುಸ್ತಕ ವಾಪಸ್ಸು ತಂದುಕೊಡುತ್ತೇನೆ ಎಂದು ಹೇಳಿದರು . 10 ನಿಮಿಷದ ಒಳಗೆ ಬರುತ್ತೇನೆ ಎಂದು ಹೇಳಿ ಹೋದವರು ವಾಪಸ್ಸು ಬರಲೇ ಇಲ್ಲ . ನಂತರ ಅವರ ವಕೀಲರ ಜೊತೆ ಬಂದರು ಹಾಗೂ ಅವರು ನಾವು ಪ್ರಕರಣವನ್ನು ಕೋರ್ಟಿನಲ್ಲಿ ನೋಡಿಕೊಳ್ಳುತ್ತೇವೆ ಎಂದು ಹೇಳಿ ಹೋದರು . ಆಗ ಪೋಲಿಸರು ನಾವು ಕೊಟ್ಟಿರುವ ರಸೀದಿಯನ್ನು ಇಟ್ಟುಕೊಳ್ಳಿ ಹಾಗುಾ ಅದನ್ನು ಕೋರ್ಟ ಗೆ ಹಾಜರು ಪಡಿಸಿ ಹಾಗೂ ನ್ಯಾಯಾಲಯದಲ್ಲಿ ಕೇಸನ್ನು ಬಗೆಹರಿಸಿಕೊಳ್ಳಿ ಎಂದು ಹೇಳಿದರು . ಆಗ ನಾನು ಬಂದು ನಮ್ಮ ವಕೀಲರನ್ನು ಭೇಟಿ ಮಾಡಿದೆ ಹಾಗೂ ನಮ್ಮ ವಕೀಲರ ಮುಖಾಂತರ ಫಿರ್ಯಾದುದಾರ

ಕೊಟ್ಟಿರುವ ನೋಟಿಸಿಗೆ ಉತ್ತರವನ್ನು ಕೊಟ್ಟಿರುತ್ತೇನೆ . ಆದರೆ ಫಿರ್ಯಾದುದಾರರು ನಾನು ಕೊಟ್ಟಿರುವ ಉತ್ತರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

(ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆ ಮುಂದೂಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.